ಆ) ಹಾಗಿದ್ದಲ್ಲಿ ಈ ಕಟ್ಟಡಗಳನ್ನು ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ ಯಲ್ಲಮ್ಮಗುಡ್ಡಕ್ಕೆ ವಹಿಸಿಕೊಟ್ಟರೆ ಯಾತ್ರಿಕರಿಗೆ ಅನುಕೂಲವಾಗುವುದು ನಿಜವಲ್ಲವೇ,

ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಬಂದಿರುತ್ತದೆ

ಸವದತ್ತಿ ನಗರದಲ್ಲಿ (ಯಲ್ಲಮ್ಮ ಗುಡ್ಡಕ್ಕೆ ಹೋಗುವ ದಾರಿಯಲ್ಲೆ) ನಿರ್ಮಿಸಿದ ಒಟ್ಟು 49 ವಸತಿ ಗೃಹಗಳಲ್ಲಿ ಹಾಲಿ 24 ರಲ್ಲಿ ಮಂಡಳಿಯ ಸಿಬ್ಬಂದಿ ವಾಸವಾಗಿರುತ್ತಾರೆ ಉಳಿದ 25 ವಸತಿ ಗೃಹಗಳು ಖಾಲಿ ಇರುತ್ತವೆ

ಆ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ

ಇ) ಉದ್ಭವಿಸುವುದಿಲ್ಲ

1476 (2086) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) – ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟಾ ತಾಲ್ಲೂಕಿನ ಯಾಣ ಕ್ಷೇತ್ರವು ಪಶ್ಚಿಮ ಘಟ್ಟದ ಸೆರಗಿನಲ್ಲಿದ್ದು ಪ್ರಕೃತಿಯ ರಮ್ಯ ತಾಣವೂ, ಪುರಾಣ ಪ್ರಸಿದ್ಧ ಸ್ಥಳವೂ ಆಗಿದ್ದು, ಅತ್ಯುತ್ತಮ ಪ್ರವಾಸಿ ತಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಪ್ರವಾಸಿಗರಿಗೆ ಉತ್ತಮ ಸೌಲಭ್ಯ ಒದಗಿಸಿ ಅಭಿವೃದ್ಧಿ ಪಡಿಸಲು ಸರ್ಕಾರ ಯೋಚಿಸಿದೆಯೇ,

ಇ) ರೆಸಾರ್ಟ್, ಮಾದರಿಯಲ್ಲಿ ಇದನ್ನು ಅಭಿವೃದ್ಧಿ ಪಡಿಸಿ, ರಸ್ತೆ ಸಂಪರ್ಕವನ್ನು ಅಭಿವೃದ್ಧಿಪಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಹೌದು

ಆ) ಚಾರಣಪ್ರಿಯರ ತಾಣವಾದ ಯಾಣ ಕ್ಷೇತ್ರವನ್ನು ಜಿಲ್ಲಾ ಆಡಳಿತ ವತಿಯಿಂದ ಅಭಿವೃದ್ಧಿ ಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ

ಇ) ಈ ಸ್ಥಳಕ್ಕೆ ರಸ್ತೆ ಸಂಪರ್ಕ ಅಭಿವೃದ್ಧಿ ಪಡಿಸಲು, ಪ್ರವಾಸಿಗರಿಗೆ ಅನುಕೂಲಗಳನ್ನು ಕಲ್ಪಿಸಲು ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ

1) 96–97 ನೇ ಸಾಲಿನಲ್ಲಿ ರೂ 10 00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕುಮಟಾದಿಂದ ಯಾಣವರೆಗಿನ ರಸ್ತೆ ಕಿ ಮೀ 0 80 ದಿಂದ 1 ಕಿ ಮೀ ವರೆಗೆ ಹಾಗೂ ಕಿ ಮೀ 12 00 ರಿಂದ ಕಿ ಮೀ 13 00 ರವರೆಗೆ ಅಭಿವೃದ್ಧಿ ಪಡಿಸಲಾಗಿದೆ

2) 98–99 ನೇ ಸಾಲಿನಲ್ಲಿ ಕಿ ಮೀ 0 48 ರಿಂದ ಕಿ ಮೀ 2 88 ರವರೆಗೆ ಆಸ್ಫಾಲ್ಟ್‌ನ್ನು ರೂ 5 00 ಲಕ್ಷಗಳ ವೆಚ್ಚದಲ್ಲಿ ಮಾಡಲಾಗಿದೆ

3) 2000–01 ನೇ ಸಾಲಿನಲ್ಲಿ ಈ ಕೆಳಕಂಡಂತೆ ಕಾಮಗಾರಿಗಳನ್ನು ರೂ 10 00 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ ವಿವರಗಳು ಈ ಕೆಳಕಂಡಂತಿವೆ

ಯಾಣ ಬಳಿ ಗಣಪತಿ ದೇವಾಲಯದಿಂದ ಭೈರವೇಶ್ವರ ದೇವಾಲಯದ ರಸ್ತೆ ಮೆಟ್ಟಲುಗಳ ಪಕ್ಕ ರೈಲಿಂಗ್ಸ್ ಮತ್ತು ಬೆಂಚುಗಳ ಅಳವಡಿಕೆ ಪವಿತ್ರ ಮರದ ಸುತ್ತ ಪ್ಲಾಟ್ ಫಾರಂ ನಿರ್ಮಾಣ 2 ಪರಗೋಲಗಳ ನಿರ್ಮಾಣ ಮತ್ತು ಭೈರವೇಶ್ವರ ದೇವಾಲಯದ ಹಿಂಭಾಗದಲ್ಲಿ ಕೊಳಾಯಿಗಳ ಅಳವಡಿಕೆ ಕುಡಿಯುವ ನೀರು ಸರಬರಾಜಿಗಾಗಿ ನೀರಿನ ತೊಟ್ಟಿ ನಿರ್ಮಾಣ ಇದಲ್ಲದೆ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಆಡಳಿತ ವತಿಯಿಂದ ಇಲ್ಲಿ ರೂ 95 50 ಲಕ್ಷಗಳ ಅಂದಾಜು ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಅವುಗಳಲ್ಲಿ ಮುಖ್ಯವಾದವುಗಳನ್ನು ಕೆಳಕಂಡಂತೆ ವಿವರಿಸಲಾಗಿದೆ

1) ಯಾಣದಲ್ಲಿ ರೂ 61 35 ಲಕ್ಷ ವೆಚ್ಚದಲ್ಲಿ ಉಪಹಾರ ಗೃಹ, ಕಾಲೇಜುಗಳು, ಸೆಕ್ಯೂರಿಟಿ ರೂಮ್, ಲ್ಯಾಂಡ್ ಸ್ಕೇಪಿಂಗ್ ಇತ್ಯಾದಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ

2) ರೂ 9 28 ಲಕ್ಷಗಳ ಅಂದಾಜು ವೆಚ್ಚದಲ್ಲಿ ಸಂಪರ್ಕ ರಸ್ತೆ ಅಭಿವೃದ್ಧಿ

3) ರೂ 2 74 ಲಕ್ಷಗಳ ಅಂದಾಜು ವೆಚ್ಚದಲ್ಲಿ ಭೈರವೇಶ್ವರ ದೇವಾಲಯದ ಸುತ್ತ ಕಂಪೌಂಡ್ ನಿರ್ಮಾಣ ಹಾಗೂ ಲ್ಯಾಂಡ್‌ಸ್ಕೇಪಿಂಗ್

4) ರೂ 5 37 ಲಕ್ಷ ರೂ ವೆಚ್ಚದಲ್ಲಿ ಭೈರವೇಶ್ವರ ದೇವಾಲಯದಿಂದ ಗೋಪಾಲಕೃಷ್ಣ ದೇವಾಲಯದ ವರೆಗಿರುವ 298 ಮೆಟ್ಟಲುಗಳ ದುರಸ್ತಿ ಕಾಮಗಾರಿ ಹಾಗೂ ರೂ 2 15 ಲಕ್ಷ ವೆಚ್ಚದಲ್ಲಿ ಶೌಚಾಲಯ ಹಾಗೂ ಸ್ನಾನ ಗೃಹಗಳ ನಿರ್ಮಾಣ

5) ರೂ 2 74 ಲಕ್ಷ ರೂ ಅಂದಾಜು ವೆಚ್ಚದಲ್ಲಿ ಭೈರವೇಶ್ವರ ದೇವಾಲಯದ ಸುತ್ತ ಕಂಪೌಂಡ್ ನಿರ್ಮಾಣ ಹಾಗೂ ಲ್ಯಾಂಡ್ ಸ್ಕೇಪಿಂಗ್

6) ರೂ 5 37 ಲಕ್ಷ ರೂ ವೆಚ್ಚದಲ್ಲಿ ಭೈರವೇಶ್ವರ ದೇವಾಲಯದಿಂದ ಗೋಪಾಲಕೃಷ್ಣ ದೇವಾಲಯದ ವರೆಗಿರುವ 298 ಮೆಟ್ಟಲುಗಳ ದುರಸ್ತಿ ಕಾಮಗಾರಿ ಹಾಗೂ ರೂ 2 15 ಲಕ್ಷ ವೆಚ್ಚದಲ್ಲಿ ಶೌಚಾಲಯ ಹಾಗೂ ಸ್ನಾನ ಗೃಹಗಳ ನಿರ್ಮಾಣ

7) ರೂ 8 00 ಲಕ್ಷಗಳ ವೆಚ್ಚದಲ್ಲಿ ಮಾಹಿತಿ ಕೇಂದ್ರ, ಸೆಕ್ಯೂರಿಟಿ ಗೇಟ್, ಪ್ಯಾರಾಗೋಲಾಗಳ ದುರಸ್ತಿ

8) ಹಾಲಿ ಇರುವ ಮೆಟ್ಟಿಲುಗಳ ರಿಪೇರಿ ಹಾಗೂ ರೈಲಿಂಗ್ ಅಳವಡಿಸಲು ರೂ 2 50 ಲಕ್ಷಗಳು

9) ರೂ 4 00 ಲಕ್ಷಗಳ ವೆಚ್ಚದಲ್ಲಿ ಗಣಪತಿ ದೇವಸ್ಥಾನದ ಅಭಿವೃದ್ಧಿ ಹಾಗೂ ಶೆಡ್ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ

1478 (1955) ಶ್ರೀ ಮೋಹನ್ ಪಿ ಸಿ (ಚಿಕ್ಕಪೇಟೆ) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನೂತನವಾಗಿ ಸೇರ್ಪಡೆ ಗೊಂಡಿರುವ 5 ವಲಯಗಳಲ್ಲಿ ಕಟ್ಟಡಗಳ ಸಮೀಕ್ಷಾ ಕಾರ್ಯ ಆರಂಭಿಸಲಾಗಿದೆಯೇ,